


# ಹಾ.ಮಾ. ನಾಯಕ

## (1931-2000)

ವಿಶಿಷ್ಟ ಅಂಕಣ ಬರಹಗಳಿಂದ, ಕನ್ನಡಪರ ಚಿಂತನೆಗಳಿಂದ ನಾಡಿನಲ್ಲಿ ಗುರುತಿಸಿಕೊಂಡ ಲೇಖಕ ಹಾರೋಗದ್ದೆ ಮಾನಪ್ಪ ನಾಯಕ (ಹಾ.ಮಾ.ನಾ.). ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆ ಎಂಬ ಊರಿನವರು. ಹಾ.ಮಾ.ನಾ. ಅವರ ತಂದೆ ಶ್ರೀನಿವಾಸ ನಾಯಕ, ತಾಯಿ ರುಕ್ಮಿಣಿಯಮ್ಮ. ಅವರ ವಿದ್ಯಾಭ್ಯಾಸ ಆಗುಂಬೆಗೆ ಹತ್ತಿರದ ನಾಲೂರಿನಲ್ಲಿ ಶುರುವಾಯಿತು. ಮೇಗರವಳ್ಳಿ, ತೀರ್ಥಹಳ್ಳಿಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಪಡೆದ ಅವರು ಬಿ.ಎ. ಪದವಿ ಪಡೆದದ್ದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ. ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದ ನಾಯಕರು ಅಮೆರಿಕದ ಇಂಡಿಯಾನ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಾಯಕರ 50ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿವೆ. ಅವರು ಅನೇಕ ಪುಸ್ತಕಗಳನ್ನು ಸಂಪಾದಿಸಿದ್ದಾರೆ. 'ಪ್ರಜಾವಾಣಿ' ದಿನಪತ್ರಿಕೆಯೂ ಸೇರಿದಂತೆ ಕನ್ನಡದ ಅನೇಕ ಪತ್ರಿಕೆಗಳಿಗೆ ಅಂಕಣಗಳನ್ನು ಬರೆದಿದ್ದಾರೆ. ಹಾ.ಮಾ.ನಾ. ಅಂಕಣಕಾರರು ಮಾತ್ರವಲ್ಲ ಭಾಷಾ ವಿಜ್ಞಾನಿಗಳೂ, ವಿಮರ್ಶಕರೂ, ಅನುವಾದಕರೂ ಹೌದು. ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದ ಅವರು ರೀಡರ್ ಆಗಿ, ಪ್ರಾಧ್ಯಾಪಕರಾಗಿ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು. ಬಳಿಕ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ನಾಯಕರು ಕೆಲಕಾಲ ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದರು.

ಕನ್ನಡವನ್ನು ಕಟ್ಟುವ ಕೆಲಸಗಳಲ್ಲಿ ಸದಾ ತೊಡಗಿರುತ್ತಿದ್ದ ನಾಯಕರ ಈ ಲೇಖನ ಅವರ ಕನ್ನಡ, ಕರ್ನಾಟಕದ ಮೇಲಿನ ಪ್ರೀತಿ, ಕಳಕಳಿಯನ್ನು ಸೂಚಿಸುವಂತಿದೆ. ಮತ್ತು ಅದು ಪ್ರಕಟವಾದ 35 ವರ್ಷಗಳ ಬಳಿಕವೂ ಪ್ರಸ್ತುತವಾಗಿದೆ. ಈ ಬರಹ ನಿಖರ, ಪ್ರಖರ ಮಾತುಗಳಲ್ಲಿ ನಾಡು–ನುಡಿಯ ವಾಸ್ತವವನ್ನು ಕನ್ನಡಿಗರ ಎದುರಿಗಿಟ್ಟಿದೆ.

**ಕರ್ನಾಟಕದ ರಾಜ್ಯಭಾಷೆ, ಕನ್ನಡ. ಇದಕ್ಕೆ ಹತ್ತಿರ ಹತ್ತಿರ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಇದರ ಸಾಹಿತ್ಯ ಹನ್ನೆರಡು ಶತಮಾನಗಳಿಂದ ಸತತವಾಗಿ ಬೆಳೆದಿದೆ. ರಾಜ್ಯಾಂಗದಲ್ಲಿ ಉಲ್ಲೇಖಗೊಂಡ ಹದಿನೈದು ರಾಷ್ಟ್ರ ಭಾಷೆಗಳಲ್ಲಿ ಒಂದಾಗಿರುವ ಕನ್ನಡ, ಸಂಸ್ಕೃತ, ತಮಿಳುಗಳ ನಂತರ ಅತ್ಯಂತ ಪ್ರಾಚೀನವಾದದ್ದು; ಇತರ ಎಷ್ಟೋ ಸಾಹಿತ್ಯಗಳಿಗಿಂತ ಸಮೃದ್ಧವಾದದ್ದು. ಒಂದು ಕಾಲದಲ್ಲಿ ಸಂಸ್ಕೃತ, ಪ್ರಾಕೃತಗಳಿಂದ, ಇನ್ನೊಂದು ಕಾಲದಲ್ಲಿ ಪರ್ಷಿಯನ್, ಅರಾಬಿಕ್ ಮೂಲಗಳಿಂದ, ಈಚಿನ ಕಾಲದಲ್ಲಿ, ಇಂಗ್ಲೀಷಿನಿಂದ ಆ ಮೂಲಕ ಇತರ ಯುರೋಪಿಯನ್ ಭಾಷೆಗಳಿಂದ ಉದಾರವಾಗಿ ಸ್ವೀಕರಿಸಿ ಶ್ರೀಮಂತಗೊಂಡಿದೆ. ಪ್ರಾಚೀನ ವಿಚಾರಗಳನ್ನಾಗಲಿ, ಆಧುನಿಕ ವಿಜ್ಞಾನಗಳನ್ನಾಗಲಿ ಅಭಿವ್ಯಕ್ತಿಸುವುದು ಕನ್ನಡಕ್ಕೆ ಕಷ್ಟವಲ್ಲ. ಅದು ಸ್ವೀಕರಣ ಭಾಷೆ, ತನ್ನ ಅಗತ್ಯವನ್ನು ಸುಲಭವಾಗಿ ಈಡೇರಿಸಿಕೊಳ್ಳಬಲ್ಲುದು. ಇಂಥ ಪರಂಪರೆಯ**